## ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 158 ಟಿಎನ್‌ಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:29-04-2020

**ರವರಿಂದ**

ಸರ್ಕಾರದ ಮುಖ್ಯ ಕಾರ್ಯದರ್ಶಿ
ಹಾಗೂ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ
ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಅಧ್ಯಕ್ಷರು,
ವಿಧಾನ ಸೌಧ, ಬೆಂಗಳೂರು

**ರವರಿಗೆ**

ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿ.

**ಮಾನ್ಯರೆ,**

**ವಿಷಯ:** ಸಿಮೆಂಟ್ ಕಾರ್ಖಾನೆಗಳನ್ನು ತೆರೆದು ಕಾರ್ಯನಿರ್ವಹಿಸುವ ಬಗ್ಗೆ.

**ಉಲ್ಲೇಖ:**
1) ಕೇಂದ್ರ ಗೃಹ ಮಂತ್ರಾಲಯದ ಮಾರ್ಗಸೂಚಿಯ ಆದೇಶ ಸಂಖ್ಯೆ 40-3/2020-ಡಿಎಂ-ಐ (ಎ), ದಿ.15.04.2020
2) ಕರ್ನಾಟಕ ರಾಜ್ಯದ ಕ್ರೋಡಿಕೃತ ಮಾರ್ಗಸೂಚಿಯ 4ನೇ ಸೇರ್ಪಡೆ ಆದೇಶ ಸಂ.ಕಂಇ 158 ಟಿಎನ್‌ಆರ್ 2020, ದಿನಾಂಕ 24.04.2020
3) ಸಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ರವರ ಸುತ್ತೋಲೆ ಸಂ.ಸಿಐ 06 ಎಸ್ ಪಿ ಐ 2020, ದಿ. 03.04.2020.

-0-

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (1)ರ ರೀತ್ಯಾ ಕೇಂದ್ರ ಗೃಹ ಮಂತ್ರಾಲಯ, ಭಾರತ ಸರ್ಕಾರದ ಆದೇಶ ಸಂಖ್ಯೆ 40-3/2020-ಡಿಎಂ-ಐ (ಎ), ದಿನಾಂಕ:15.04.2020ರಲ್ಲಿ ಭಾರತ ಸರ್ಕಾರದ ಮಂತ್ರಾಲಯ/ ಇಲಾಖೆಗಳಿಗೆ, ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಎಲ್ಲಾ ಇಲಾಖೆಗಳಿಗೆ ದೇಶದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸಲು ಕೇಂದ್ರ ಗೃಹ ಮಂತ್ರಾಲಯದ ದಿ:15.04.2020ರ ಕ್ರೋಡಿಕೃತ ಪರಿಷ್ಕೃತ ಮಾರ್ಗಸೂಚಿಗಳಲ್ಲಿ ನಿಗದಿಪಡಿಸಿರುವ ಲಾಕ್ ಡೌನ್ ಕ್ರಮಗಳು ದಿ:03.05.2020ರ ಮಧ್ಯರಾತ್ರಿ ವರೆವಿಗೆ ಜಾರಿಯಲ್ಲಿರುತ್ತವೆ.

ಕರ್ನಾಟಕ ರಾಜ್ಯಾದ್ಯಂತ ಕೋವಿಡ್-19 ಸೋಂಕನ್ನು ತಡೆಗಟ್ಟಲು ಸರ್ಕಾರವು ಕಾಲಕಾಲಕ್ಕೆ ಕಟ್ಟುನಿಟ್ಟಿನ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸಲು ಆದೇಶಿಸಿದೆ. ಉಲ್ಲೇಖ (2)ರ ರೀತ್ಯಾ ರಾಜ್ಯ ಸರ್ಕಾರವು ಹೊರಡಿಸಿರುವ ಸೇರ್ಪಡೆ ಆದೇಶದ ಉಧೃತ ಭಾಗವು ಈ ಕೆಳಕಂಡಂತಿದೆ:

*Sub-clause (vi) under Clause 15: Production units, which require continous process, and their supply chain.*

ಉಲ್ಲೇಖ (3)ರಲ್ಲಿ ಸಿಮೆಂಟ್ ಕಾರ್ಖಾನೆ ನಡೆಸಲು ಅನುಮತಿ ನೀಡಲಾಗಿರುತ್ತದೆ. ಆದ್ದರಿಂದ ಉಲ್ಲೇಖ (1) (2) ಮತ್ತು (3)ರೀತ್ಯಾ ಸಿಮೆಂಟ್ ಕಾರ್ಖಾನೆಗಳನ್ನು ತೆರೆದು ಗರಿಷ್ಠ ಶೇಕಡ 25ರಷ್ಟು ಸಿಬ್ಬಂದಿಯೊಂದಿಗೆ ಕಾರ್ಯನಿರ್ವಹಿಸಲು ಕ್ರಮಕೈಗೊಳ್ಳುವಂತೆ ಸೂಚಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಟಿ.ಕೆ.ಅನಿಲ್ ಕುಮಾರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ ಸದಸ್ಯ ಕಾರ್ಯದರ್ಶಿ

**ಪ್ರತಿ ಮಾಹಿತಿಗಾಗಿ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಬೆಂಗಳೂರು